# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 234 | Pages. 2 | Date: 29-07-2025, TUESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 234 - ಪುಟಗಳು : 2 - 29 ಜುಲೈ 2025 ಮಂಗಳವಾರ | Ph: 8762954248 | ದರ : ₹1


# ಸಂಸದ ಶ್ರೇಯಸ್ ಪಟೇಲ್ ಮ್ಯಾರಾಥಾನ್ ಮೀಟಿಂಗ್

## ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸರಣಿ ಸಭೆ | ಜನರ ಸಮಸ್ಯೆಗೆ ಸ್ಪಂದಿಸಲು ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರು ಸೋಮವಾರ ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ಸರಣಿ ಸಭೆಗಳ ಮೂಲಕ ಸಾರ್ವಜನಿಕರ ನೆರವಿಗೆ ಧಾವಿಸಬೇಕು ಎಂದು ಸೂಚನೆ ನೀಡಿದರು.

ಬೆಳಿಗ್ಗೆ ಸಕಲೇಶಪುರ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪರಿಶೀಲಿಸಿದ ಅವರು ಮಧ್ಯಾಹ್ನದ ಬಳಿಕ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಸಂಸದರ ಕೊಠಡಿಯಲ್ಲಿ ಇಲಾಖಾವಾರು ಅಧಿಕಾರಿಗಳ ಸಭೆ ನಡೆಸಿ ಅಗತ್ಯ ಮಾಹಿತಿ ಪಡೆದರು.

### ಆರೋಗ್ಯ ಕಾಳಜಿ ವಹಿಸಿ

ಜಿಲ್ಲೆಯಲ್ಲಿ ಇತ್ತೀಚೆಗೆ ಹೃದಯಾಘಾತ ಪ್ರಕರಣಗಳು ಹೆಚ್ಚು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಸದ್ಯದ ಸ್ಥಿತಿಗತಿ ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ಪಡೆದರು.

ಶಾಲಾ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸುವಂತೆ ಈಗಾಗಲೇ ಸೂಚಿಸಲಾಗಿದೆ. ಆಸ್ಪತ್ರೆಗಳಲ್ಲಿ ಇಸಿಜಿ, ಎಕೋ ತಪಾಸಣೆಗೆ ವ್ಯವಸ್ಥೆ ಮಾಡಿಕೊಳ್ಳಬೇಕು.

ಜನರ ಆರೋಗ್ಯ ಹಿತದೃಷ್ಟಿಯಿಂದ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ಮುತುವರ್ಜಿಯಿಂದ ಕೆಲಸ ಮಾಡುವಂತೆ ಸೂಚನೆ ನೀಡಿದರು.



### ಅರಣ್ಯ ಇಲಾಖೆ ಜವಾಬ್ದಾರಿ ಹೆಚ್ಚು

ಅರಣ್ಯ ಇಲಾಖೆ ಹಾಗೂ ಟೆಲಿಕಾಂ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಂಸದರು, ಮಲೆನಾಡು ಭಾಗದಲ್ಲಿ ವ್ಯಾಪಕ ಮಳೆ ಸುರಿಯುತ್ತಿರುವುದರಿಂದ ಸಮಸ್ಯೆಗಳು ಹೆಚ್ಚುತ್ತಿವೆ. ರಸ್ತೆಗೆ ಅಡ್ಡಲಾಗಿ ಮರ ಬಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ಜೊತೆಗೆ ದೂರವಾಣಿ ಸಂಪರ್ಕದಲ್ಲಿ ವ್ಯತ್ಯಯವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಅಧಿಕಾರಿಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು. ಈ ಹಂತದಲ್ಲಿ ಅರಣ್ಯ ಇಲಾಖೆ ಜವಾಬ್ದಾರಿ ಹೆಚ್ಚಿದೆ ಎಂದರು. ಜಿಲ್ಲಾ ಯೋಜನಾ ನಿರ್ದೇಶಕರು, ಮಹಾನಗರ ಪಾಲಿಕೆ ಆಯುಕ್ತರು, ಜಿಲ್ಲಾ ಹೌಸಿಂಗ್ ನೋಡಲ್ ಅಧಿಕಾರಿ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳೊಂದಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಮನೆ ಇಲ್ಲದ ಮತ್ತು ನಿವೇಶನ ಇಲ್ಲದ ಸಾರ್ವಜನಿಕರು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ವ್ಯಾಪಕ ಪ್ರಚಾರ ಮಾಡಬೇಕೆಂದು ಈಗಾಗಲೇ ಸ್ಥಳೀಯ ಸಂಸ್ಥೆ ಮುಖ್ಯಾಧಿಕಾರಿಗಳೊಂದಿಗೆ ಸಭೆ ನಡೆಸಲಾಗಿದೆ. ಯೋಜನೆ ಕುರಿತು ವ್ಯಾಪಕ ಪ್ರಚಾರ ಮಾಡಿ ನಿಗದಿತ ಸಮಯದೊಳಗೆ ಅರ್ಜಿ ಪಡೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸೂಚಿಸಿದರು.

> ಮುಂಗಾರು ಮಳೆ ಮತ್ತೆ ಚುರುಕಾಗಿರುವುದರಿಂದ ನಿಗದಿತ ಗಡುವಿನೊಳಗೆ ರಾಷ್ಟ್ರೀಯ ಹೆದ್ದಾರಿ ಕೆಲಸ ಮುಗಿಸಲು ಸಾಧ್ಯವಾಗಿಲ್ಲ. ಭೂ ಕುಸಿತ ಸಂಭವಿಸಿದ ಸ್ಥಳಗಳನ್ನು ಪರಿಶೀಲಿಸಿ ಮಣ್ಣು ತೆರವು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.
>
> – ಶ್ರೇಯಸ್ ಪಟೇಲ್, ಸಂಸದ

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದ ಯೋಜನಾ ಅಧಿಕಾರಿ ಸೈಯದ್ ಅಮಾನುಲ್ಲಾ, ವ್ಯವಸ್ಥಾಪಕ ವಿಪಿನ್ ಶರ್ಮಾ, ತಹಶೀಲ್ದಾರ್ ಮೋಹನ್, ಕಾಂಗ್ರೆಸ್ ಮುಖಂಡರಾದ ಸೈಯದ್ ಮುಫೀಸ್, ಬೈಕೆರೆ ದೇವರಾಜ್, ಹೆಚ್.ಹೆಚ್. ಉದಯ್, ಪ್ರಶಾಂತ್, ಗಿರೀಶ್ ಇತರರಿದ್ದರು.



## ಕರಾವಳಿ ಜನರ ಜೀವನಾಧಾರ ಶಿರಾಡಿ ರಸ್ತೆ

ಶಿರಾಡಿ ಘಾಟ್ ರಸ್ತೆ ಕರಾವಳಿ ಜನರ ಜೀವನಾಧಾರವಾಗಿದ್ದು ರಸ್ತೆ ಅವ್ಯವಸ್ಥೆಯಿಂದ ಮಂಗಳೂರು ಬಂದರಿನಲ್ಲಿ ವಾಣಿಜ್ಯ ಚಟುವಟಿಕೆ ಸ್ತಬ್ದವಾಗಿರುವುದಲ್ಲದೆ ಸ್ಥಳೀಯರ ಉದ್ಯೋಗಕ್ಕೂ ತೊಂದರೆಯಾಗಿದೆ ಎಂದು ಮಾಜಿ ಸಚಿವ ನಾಗರಾಜು ಶೆಟ್ಟಿ ಹೇಳಿದರು.

ಸಂಸದ ಶ್ರೇಯಸ್ ಪಟೇಲ್ ಅವರು ರಾಷ್ಟ್ರೀಯ ಹೆದ್ದಾರಿ 75ರ ದೊಡ್ಡತಪ್ಪಲು ಬಳಿ ರಸ್ತೆ ಕಾಮಗಾರಿ ಪರಿಶೀಲಿಸುತ್ತಿದ್ದಾಗ ಬೆಂಗಳೂರಿಗೆ ತೆರಳುತ್ತಿದ್ದ ಅವರು ಸಂಸದರ ಬಳಿಗೆ ಬಂದು ಕಾಮಗಾರಿ ಕುರಿತು ಮಾಹಿತಿ ಪಡೆದರು.

ಕರಾವಳಿ ಜಿಲ್ಲೆಗಳಿಗೆ ಸಂಪರ್ಕಿಸುವ ಪ್ರಮುಖ ರಸ್ತೆ ಇದಾಗಿದೆ. ಮಂಗಳೂರು ಬಂದರಿನಿಂದ ರಾಜ್ಯದ ವಿವಿಧೆಡೆ ಸರಕುಗಳ ಸಾಗಿಸಲು ಈ ರಸ್ತೆ ಆಧಾರವಾಗಿದೆ. ಆದರೆ 13 ವರ್ಷಗಳಿಂದ ಕಾಮಗಾರಿ ಕುಂಟುತ್ತಾ ಸಾಗಿರುವುದು ದಕ್ಷಿಣ ಕನ್ನಡ ಜಿಲ್ಲೆಯ ಮೇಲೆ ದುಷ್ಪರಿಣಾಮ ಬೀರಿದೆ. ರಸ್ತೆ ಇಲ್ಲದ ಕಾರಣಕ್ಕೆ ಚೈನ್ನೈ ಬಂದರು ಮೂಲಕ ಸಾಮಾಗ್ರಿಗಳು ಸರಬರಾಜು ಆಗುತ್ತಿವೆ. ಅದರಿಂದ ನಮ್ಮ ಜಿಲ್ಲೆಯ ಜನರು ಉದ್ಯೋಗವಿಲ್ಲದೆ ಪರದಾಡುವಂತಾಗಿದೆ ಎಂದು ಹೇಳಿದರು.

ಈ ಕೆಲಸವನ್ನು ಬೇಗ ಮುಗಿಸಿಕೊಡುವಂತೆ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಮುಂದಿನ ವಾರ ಭೇಟಿಯಾಗಿ ಮನವಿ ಸಲ್ಲಿಸಲಾಗುವುದು. ಮಳೆಯಾಗುತ್ತಿರುವುದರಿಂದ ಕೆಲಸ ಮಾಡಲು ಸಾಧ್ಯವಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಅಧಿಕಾರಿಗಳು ಮುತುವರ್ಜಿ ವಹಿಸಿದರೆ 2026ರ ಏಪ್ರಿಲ್ ಅಥವಾ ಮೇ ಒಳಗೆ ಕೆಲಸ ಮುಗಿಸಬಹುದು ಎಂದರು.

ಸಂಸದ ಶ್ರೇಯಸ್ ಪಟೇಲ್ ಅವರು ಮೊದಲ ಬಾರಿಗೆ ಸಂಸತ್ ಪ್ರವೇಶಿಸಿ ಈ ರಸ್ತೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ.



ರಾಜಕೀಯದಲ್ಲಿ ಅವರು ಇನ್ನೂ ಬೆಳೆಯಬೇಕೆಂದರೆ ದೊಡ್ಡ ದೊಡ್ಡ ಕೆಲಸಗಳು ನಿಗದಿತ ಅವಧಿಯೊಳಗೆ ಮುಗಿಯಬೇಕು. ಜನರು ಅವರ ಮೇಲಿಟ್ಟಿರುವ ವಿಶ್ವಾಸ ಉಳಿಯಬೇಕೆಂದರೆ ಕೆಲಸಗಳು ತ್ವರಿತಗತಿಯಲ್ಲಿ ಆಗಬೇಕು ಎಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ದೊಡ್ಡತಪ್ಪಲು ಬಳಿ ಅಂದಾಜು 750 ಮೀಟರ್ ತಡೆಗೋಡೆ ನಿರ್ಮಿಸಬೇಕಾಗಿದೆಯಾದರೂ ಮಳೆ ಬಿಡುವು ನೀಡಲೇಬೇಕಿದೆ. ಈಗಲೇ ಕಾಮಗಾರಿ ಕೈಗೊಂಡರೆ ಅದು ಅಪೂರ್ಣವಾಗುತ್ತದೆ. ಹೀಗಾಗಿ ಸೆಪ್ಟೆಂಬರ್‌ನಲ್ಲಿ ಕೈಗೆತ್ತಿಕೊಳ್ಳಲಾಗುವುದು. ದೋಣಿಗಲ್ ಹತ್ತಿರ 600 ಮೀಟರ್ ಡಾಂಬರು ಕಾಮಗಾರಿ ಬಾಕಿಯಿದೆ. ನಿರಂತರ ಮಳೆ ಸುರಿಯುತ್ತಿರುವುದರಿಂದ ಅಡಚಣೆಯಾಗುತ್ತಿದೆ. ಸಾಕಷ್ಟು ಸವಾಲುಗಳಿದ್ದರೂ ವಾಹನ ಸವಾರರಿಗೆ ತೊಂದರೆ ಆಗದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

## ಆಶಾ ಕಾರ್ಯಕರ್ತೆಯರಿಗೆ ನೆರವಿನ ಭರವಸೆ



ಸಕಲೇಶಪುರ: ಆಶಾ ಕಾರ್ಯಕರ್ತೆಯರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಭರವಸೆ ನೀಡಿದರು.

ಪಟ್ಟಣದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಆಶಾ ಕಾರ್ಯಕರ್ತೆಯರ ಕುಂದು ಕೊರತೆ ಸ್ವೀಕಾರ ಸಭೆಯಲ್ಲಿ ಮಾತನಾಡಿ, ಆಶಾ ಕಾರ್ಯಕರ್ತೆಯರ ಕೆಲಸವು ಸಮಾಜದಲ್ಲಿ ಆರೋಗ್ಯ ಸೇವೆಯನ್ನು ಒದಗಿಸುವುದು ಮತ್ತು ಆರೋಗ್ಯ ಸಂಬಂಧಿತ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದಾಗಿದೆ. ಆಶಾ ಕಾರ್ಯಕರ್ತೆಯರು ಸಮುದಾಯ ಮತ್ತು ಆರೋಗ್ಯ ವ್ಯವಸ್ಥೆಯ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೇವೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ನಿಟ್ಟಿನಲ್ಲಿ ಅವರ ಬೇಡಿಕೆಗಳನ್ನು ಈಡೇರಿಸುವುದು ಸರ್ಕಾರದ ಕರ್ತವ್ಯ ಎಂದರು.

ರಾಜ್ಯ ಸರ್ಕಾರ ಕಾರ್ಯಕರ್ತೆಯರ ಬೇಡಿಕೆಗಳನ್ನು ಹಗುರವಾಗಿ ಪರಿಗಣಿಸಿರುವುದು ಖಂಡನೀಯ. ಈ ಸಂಬಂಧ ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇನೆ. ಎಸ್ಟೇಟ್‌ಗಳಲ್ಲಿ ಹೊರ ರಾಜ್ಯದ ಕಾರ್ಮಿಕರ ಆರೋಗ್ಯ ಸಮಸ್ಯೆ ತಿಳಿಯಲು ತೆರಳುವ ಸಿಬ್ಬಂದಿಗೆ ಮಾಲೀಕರು ಹಾಗೂ ಕಾರ್ಮಿಕರು ಸೂಕ್ತ ದಾಖಲಾತಿ ನೀಡಿ ಸಹಕರಿಸುವಂತೆ ತಿಳಿಸಿದರು.

ಶಾಸಕರಿಗೆ ಮನವಿ ಸಲ್ಲಿಸಿ ಮಾತನಾಡಿದ ಆಶಾ ಕಾರ್ಯಕರ್ತೆಯರು, ಹೆಚ್ಚುವರಿ ಕೆಲಸ ಮತ್ತು ಕಡಿಮೆ ಗೌರವಧನದಿಂದ ಕುಟುಂಬ ನಿರ್ವಹಣೆ ಕಷ್ಟವಾಗುತ್ತಿದೆ. ತಾಲ್ಲೂಕು ವೈದ್ಯಾಧಿಕಾರಿ ಡಾ. ಮಹೇಶ್, ಆಶಾ ಕಾರ್ಯಕರ್ತೆಯರ ತಾಲ್ಲೂಕು ಮೇಲ್ವಿಚಾರಕಿ ಭೂಮಿಕಾಗೌಡ ಉಪಸ್ಥಿತರಿದ್ದರು.

## ಹುಡಾ ಅಧ್ಯಕ್ಷ ಸ್ಥಾನ ಸ್ಥಳೀಯರಿಗೆ ನೀಡಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ನಾಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆಯನ್ನು ಸ್ಥಳೀಯರಿಗೆ ನೀಡಬೇಕು ಎಂದು ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಸೋಮವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಹುಡಾವರೆಗೆ ಮೆರವಣಿಗೆ ನಡೆಸಿದ ನೂರಾರು ಮಂದಿ ಮುಖಂಡರು, ಕಾರ್ಯಕರ್ತರು, ಹಾಸನ ವಿಧಾನಸಭಾ ಕ್ಷೇತ್ರದವರನ್ನೇ ಅಧ್ಯಕ್ಷರನ್ನಾಗಿ ಮಾಡಿ ಎಂದು ಒತ್ತಾಯಿಸಿದರು.

ಹೊರಗಿನವರಿಗೆ ಮಣೆ ಹಾಕಿದರೆ ಅವರಿಗೆ ನಗರದ ಅಭಿವೃದ್ಧಿ ಹಾಗೂ ಜನರ ಹಿತಕ್ಕೆ ಅವರ ಸ್ವ ಅಭಿವೃದ್ಧಿಯೇ ಮುಖ್ಯವಾಗುತ್ತದೆ. ಪಕ್ಷ ಸಂಘಟನೆಗೂ ತೊಂದರೆ ಆಗಲಿದೆ ಎಂದು ಎಚ್ಚರಿಸಿದರು. ಯುವ ಮುಖಂಡ ಚಂದ್ರು ಮಾತನಾಡಿ, ಕಳೆದ ಹಲವು ವರ್ಷಗಳಿಂದ ಹಾಸನದಲ್ಲಿ ಪಕ್ಷ ಸಂಘಟನೆಗಾಗಿ ದುಡಿದಿರುವ ಹೆಚ್.ಕೆ. ಮಹೇಶ್ ಸೇರಿದಂತೆ ಸಾಕಷ್ಟು ಮಂದಿ ಇದ್ದಾರೆ. ಯಾರೇ ಆಗಲಿ ಸ್ಥಳೀಯರಿಗೆ ಮಾತ್ರ ಆದ್ಯತೆ ಕೊಡಿ ಎಂದು ಒತ್ತಾಯಿಸಿದರು.

ಇವರಿಗೆ ಬೂತ್ ಮಟ್ಟದ ಕಾರ್ಯಕರ್ತರು, ಮುಖಂಡರು ಗೊತ್ತಿರುತ್ತಾರೆ. ಆದರೆ ಹಾಲಿ ಚಾಲ್ತಿಯಲ್ಲಿರುವ ಪಟೇಲ್ ಶಿವಪ್ಪ, ಪ್ರಸನ್ನ ಮೊದಲಾದವರಿಗೆ ಮಣೆ ಹಾಕಿದರೆ ಅವರಿಗೆ ಬೂತ್ ಪರಿಚಯ ಸೇರಿದಂತೆ ಯಾರೂ ಗೊತ್ತಿಲ್ಲ. ಹೀಗಾದರೆ ಪಕ್ಷ ಸಂಘಟನೆಯೂ ಆಗುವುದಿಲ್ಲ ಎಂದು ಎಚ್ಚರಿಸಿದರು.

ಕೆಲವರು ಅಧಿಕಾರ ಪಡೆಯುವುದಕ್ಕಾಗಿ ಅನೇಕ ರೀತಿಯ ಸುಳ್ಳು ಹೇಳುತ್ತಾರೆ. ರಾಜ್ಯ ನಾಯಕರು ಪ್ರತಿಯೊಂದನ್ನೂ ಪರಿಗಣಿಸಬೇಕು. ನಿಷ್ಠಾವಂತ ಮುಖಂಡರು ಹಾಗೂ ಕಾರ್ಯಕರ್ತರಿಗೆ ಮನ್ನಣೆ ನೀಡುವಂತೆ ಮನವಿ ಮಾಡಿದರು. ನಮ್ಮೆಲ್ಲರ ಆಶೋತ್ತರಗಳಿಗೆ ಸ್ಪಂದಿಸದೇ ಇದ್ದರೆ, ನಾವೂ ಹೋರಾಟದ ಹಾದಿ ತುಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕಾಂಗ್ರೆಸ್‌ನ ರಂಗಸ್ವಾಮಿ, ಪ್ರಸನ್ನ, ಪರಶುರಾಂ ಮತ್ತಿತರರಿದ್ದರು.

## ಚೆಸ್ ಪಂದ್ಯಾವಳಿ ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದನೆ




ಹಾಸನ: ನಗರದಲ್ಲಿ ಈಚೆಗೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ಬಹುಮಾನ ವಿಜೇತರಾದ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯ ವಿದ್ಯಾರ್ಥಿಗಳನ್ನು ಸೋಮವಾರ ಅಭಿನಂದಿಸಲಾಯಿತು.

ಅಕಾಡೆಮಿ ಕಚೇರಿಯಲ್ಲಿ ಪತ್ರಕರ್ತ ಮಂಜು ಬನವಾಸೆ, ಬಹುಮಾನ ವಿಜೇತ ವಿದ್ಯಾರ್ಥಿಗಳಾದ ರಿಷಬ್ ಗೋಪಾಲ್ ಹಾಗೂ ಸಂಚಿತ್ ಅವರನ್ನು ಸ್ಮರಣಿಕೆ ನೀಡಿ, ಮೆಡಲ್ ಹಾಕಿ ಅಭಿನಂದಿಸಿದರು.

ಅಕಾಡೆಮಿಯ ಪಾಲುದಾರ ವೇಣುಗೋಪಾಲ್ ಮಾತನಾಡಿ, ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ನಮ್ಮ ಇಬ್ಬರು ವಿದ್ಯಾರ್ಥಿಗಳು ಮಾಡಿರುವ ಸಾಧನೆ ಪ್ರಶಂಸಾರ್ಹವಾಗಿದೆ. ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಪ್ರತಿಭಾವಂತ ಆಟಗಾರರನ್ನು ಮಣಿಸಿ ಬಹುಮಾನ ಪಡೆದಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಕ್ಕಳು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರುವಂತಾಗಬೇಕು ಎಂದರು.

ಚೆಸ್ ತರಬೇತುದಾರ ಭರತ್, ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿ ಪಾಲುದಾರರಾದ ಸತೀಶ್, ಸುರೇಶ್, ಪತ್ರಕರ್ತ ಇಬ್ಬೀಡು ಕೃಷ್ಣಮೂರ್ತಿ ಹಾಗೂ ಮಕ್ಕಳ ಪಾಲಕರು ಇದ್ದರು.

ಬಹುಮಾನ: ನಗರದಲ್ಲಿ ಆಯೋಜನೆಯಾಗಿದ್ದ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿನ 7 ವರ್ಷ ವಯೋಮಿತಿಯ ವಿಭಾಗದಲ್ಲಿ ಬೆಸ್ಟ್ ಹಾಸನ್ ವಿಭಾಗದಲ್ಲಿ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯ ರಿಷಬ್ ಗೋಪಾಲ್ ಮೊದಲನೇ ಸ್ಥಾನ ಹಾಗೂ ರಾಜ್ಯ ಮಟ್ಟದ ವಿಭಾಗದಲ್ಲಿ ಸಂಚಿತ್ 5ನೇ ಸ್ಥಾನ ಪಡೆದಿದ್ದಾರೆ.

## 1.16 ಲಕ್ಷ ರೂ. ಮೊತ್ತದ ಅಕ್ಕಿ, ರಾಗಿ ಕಳವು

ಚನ್ನರಾಯಪಟ್ಟಣ: ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಕಚೇರಿಯ ಪಡಿತರ ವಿತರಣಾ ಕೇಂದ್ರದ ಬೀಗ ಮುರಿದಿರುವ ಕಳ್ಳರು 1.16 ಲಕ್ಷ ರೂ. ಮೌಲ್ಯದ ಅಕ್ಕಿ ಹಾಗೂ ರಾಗಿ ಕಳವು ಮಾಡಿದ್ದಾರೆ.

ಜು. 26ರ ಮಧ್ಯರಾತ್ರಿ ಕೇಂದ್ರದ ಬಾಗಿಲು ಮುರಿದಿರುವ ಕಳ್ಳರು 50 ಕೆ.ಜಿ. ತೂಕದ 46 ಚೀಲ ರಾಗಿ, 15 ಚೀಲ ಅಕ್ಕಿ ಹಾಗು 480 ಖಾಲಿ ಚೀಲಗಳನ್ನು ಕಳ್ಳತನ ಮಾಡಿದ್ದಾರೆ. ನಂತರ ಕಚೇರಿ ಆವರಣದಲ್ಲಿರುವ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ ಕಚೇರಿಯ ಬೀಗ ಮುರಿಯಲು ಯತ್ನಿಸಿದ್ದು ಅದು ಸಾಧ್ಯವಾಗದೆ ವಾಪಸ್ಸಾಗಿದ್ದಾರೆ.

## ಶ್ರೇಷ್ಠ ಪ್ರತಿಭೆಗಳ ಹೆಗ್ಗಳಿಕೆಗೆ 'ಸ್ಕಾಲರ್ಸ್ ಇಂಟರ್‌ನ್ಯಾಶನಲ್ ಸ್ಕೂಲ್'

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಸ್ಕಾಲರ್ಸ್ ಇಂಟರ್ ನ್ಯಾಶನಲ್ ಸ್ಕೂಲ್‌ನವರು ತಮ್ಮ ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ, ಸಹಪಠ್ಯ ಚಟುವಟಿಕೆಗಳಲ್ಲಿಯೂ ಅದ್ಭುತ ಸಾಧನೆಗಳನ್ನು ದಾಖಲಿಸುತ್ತಿದ್ದಾರೆ. ಇತ್ತೀಚೆಗಷ್ಟೇ ನಡೆದ ಎರಡು ವಿಭಿನ್ನ ಕ್ಷೇತ್ರಗಳ state-level ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಯರ ಸಾಧನೆಗೆ ಶಾಲೆ ಗೌರವತುಂಬಿದ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

2025ರ ಜುಲೈ 26 ಮತ್ತು 27 ರಂದು ಬೆಂಗಳೂರಿನ ಚಾಂಪಿಯನ್ ಚೇಸರ್ಸ್ ಜಿಮ್ನಾಸ್ಟಿಕ್ ಅಕಾಡೆಮಿ ಆಯೋಜಿಸಿದ್ದ ಅಂತರ್ ಶಾಲಾ ಹಾಗೂ ಅಂತರ್ ಕ್ಲಬ್ ಸ್ಪರ್ಧೆಯಲ್ಲಿ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿನಿ ಮಾನ್ಯಾ ಪ್ರಥಮ ಸ್ಥಾನ ಪಡೆದಿದ್ದಾರೆ. ಜಿಮ್ನಾಸ್ಟಿಕ್‌ನಂತಹ ಶಾರೀರಿಕ ಸಾಮರ್ಥ್ಯ ಮತ್ತು ತಂತ್ರಜ್ಞಾನವನ್ನು ಒಟ್ಟಿಗೆ ಹೊಂದಿರುವ ಕ್ರೀಡೆಯಲ್ಲಿ ಮಾನ್ಯಾಳ ತಾಳ್ಮೆ, ಅಭ್ಯಾಸ ಮತ್ತು ಪ್ರತಿಭೆ ಸ್ಪಷ್ಟವಾಗಿ ಮೆರೆದಿದೆ.




ಇತ್ತ, ಕಲಾ ಕ್ಷೇತ್ರದಲ್ಲಿ ಮಕ್ಕಳ ಪ್ರತಿಭೆ ಬೆಳಗಿದ ಮತ್ತೊಂದು ಘಳಿಗೆ. ಕನಸು, ನಾಲ್ಕನೇ ತರಗತಿಯ ವಿದ್ಯಾರ್ಥಿನಿ, ಚನ್ನಪಟ್ಟಣದಲ್ಲಿ ನಡೆದ 'ಡ್ಯಾನ್ಸ್ ಅಪ್ಪು ಡ್ಯಾನ್ಸ್' ಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಸ್ಥಾನ ಪಡೆದು ಶಾಲೆಗೆ ಮತ್ತು ಪೋಷಕರಿಗೆ ಹೆಮ್ಮೆಯ ಕ್ಷಣ ನೀಡಿದ್ದಾಳೆ. ನೃತ್ಯದ ಪ್ರತಿ ಹೆಜ್ಜೆಯಲ್ಲಿಯೂ ಉತ್ಸಾಹ, ನಿರ್ವಹಣಾ ಶಕ್ತಿ ಮತ್ತು ರಂಗಸ್ಥಳೀಯ ಪ್ರಭಾವವನ್ನು ವ್ಯಕ್ತಪಡಿಸಿದ ಕನಸುಗೆ ಪ್ರೇಕ್ಷಕರು ಕೂಡ ಭರ್ಜರಿ ಚಪ್ಪಾಳೆ ಬಡಿಸಿದರು. ಈ ಇಬ್ಬರೂ ಸಾಧಕರಿಗೂ ಶಾಲೆಯ ಆಡಳಿತ ಮಂಡಳಿ ಡಾ.ಚಂದ್ರಶೇಖರ್, ಪ್ರಾಂಶುಪಾಲರು, ಶಿಕ್ಷಕರು, ಪೋಷಕರು ಮತ್ತು ಸಹಪಾಠಿಗಳು ಹೃದಯಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ. ಶಾಲೆಯ ಆಡಳಿತಾಧಿಕಾರಿ ಡಾ.ಚಂದ್ರಶೇಖರ್ ಅವರು ಹೇಳಿದಂತೆ, ವಿದ್ಯಾರ್ಥಿಗಳು ಶೈಕ್ಷಣಿಕ ಕ್ಷೇತ್ರದಲ್ಲಷ್ಟೇ ಅಲ್ಲದೆ, ಕಲೆ ಮತ್ತು ಕ್ರೀಡಾ ಕ್ಷೇತ್ರದಲ್ಲಿಯೂ ಉನ್ನತ ಸಾಧನೆ ತೋರಿಸುತ್ತಿರುವುದು ಶಾಲೆಯ ಸಮಗ್ರ ಅಭಿವೃದ್ಧಿಯ ಚಿಹ್ನೆ. ಇಂತಹ ಸಾಧನೆಗಳು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿ ಕಾರ್ಯನಿರ್ವಹಿಸುತ್ತವೆ.

ಸ್ಕಾಲರ್ಸ್ ಇಂಟರ್‌ನ್ಯಾಶನಲ್ ಸ್ಕೂಲ್ ತನ್ನ ವಿದ್ಯಾರ್ಥಿಗಳಲ್ಲಿ ವೈಯಕ್ತಿಕ ಹಾಗೂ ಸಮೂಹೀಯ ಬೆಳವಣಿಗೆಯನ್ನು ಉತ್ತೇಜಿಸುವ ಶಿಕ್ಷಣ ನೀತಿಯೊಂದಿಗೆ ಮುನ್ನಡೆದು, ಇಂಥ ಶ್ರೇಷ್ಠ ಸಾಧಕರನ್ನು ರೂಪಿಸುತ್ತಿದೆ. ಶಾಲೆಯ ಶಿಕ್ಷಕ ವೃಂದ, ತರಬೇತುದಾರರು ಮತ್ತು ಪಾಲಕರು ಮಕ್ಕಳು ತೋರಿಸುತ್ತಿರುವ ಪ್ರಗತಿಗೆ ಪೂರಕ ಶ್ರಮ ಸಲ್ಲಿಸುತ್ತಿದ್ದಾರೆ.

ಈ ಸಾಧನೆಗಳು ಶಾಲೆಯ ಮತ್ತು ಪೋಷಕರ ಹೆಸರು ಎತ್ತರಕ್ಕೆ ತಲುಪಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಪ್ರತಿಭೆಗಳು ಬೆಳಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಶಾಲೆಯ ಹೆಸರನ್ನು ಬೆಳಗಿಸಲಿ ಎಂಬ ಆಶಯವಿದೆ.


ಕನ್ನಡ ಪೋಸ್ಟ್ ಇದು ಸುದ್ದಿ ವಿಳಾಸ
KANNADA POST
ಕನ್ನಡ ದಿನ ಪತ್ರಿಕೆ Kannada Daily

ವರದಿಗಾರರು ಬೇಕಾಗಿದ್ದಾರೆ.

'ಕನ್ನಡಪೋಸ್ಟ್' ಕನ್ನಡ ದಿನಪತ್ರಿಕೆ
'kannadapost.in'
'ಕನ್ನಡಪೋಸ್ಟ್' ಡಿಜಿಟಲ್

ಹಾಸನ ಜಿಲ್ಲೆಯ ತಾಲೂಕು ಕೇಂದ್ರ, ಪ್ರಮುಖ ಹೋಬಳಿ ಕೇಂದ್ರಗಳಿಗೆ ನವ ಮಾಧ್ಯಮದ ವೇಗಕ್ಕೆ ತಕ್ಕಂತೆ ಕೆಲಸ ಮಾಡುವ ಉತ್ಸಾಹಿ ವರದಿಗಾರರು ಬೇಕಾಗಿದ್ದಾರೆ.

ಆಸಕ್ತರು ಸಂಪರ್ಕಿಸಿ:
ಪ್ರತಾಪ್ ಹಿರೀಸಾವೆ
ಮೊ.ಸಂ. 9481136478

KANNADAPOSTNEWS | KANNADAPOSTDIGITAL | ಕನ್ನಡ POST | 8762954248

# ಅನ್ನಭಾಗ್ಯ ಅಕ್ಕಿ ಬೇಡ: ಪರ್ಯಾಯ ಪದಾರ್ಥ ಕೊಡಿ

## ಸಾರ್ವಜನಿಕ ಅಭಿಪ್ರಾಯಕ್ಕೆ ಮುಂದಾದ ಜಿಲ್ಲಾಡಳಿತ | ಸರ್ಕಾರಕ್ಕೆ ವರದಿ ಸಲ್ಲಿಸಲು ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅನ್ನಭಾಗ್ಯ ಯೋಜನೆಯಡಿ ವಿತರಿಸುತ್ತಿರುವ ಅಕ್ಕಿ ಅಧಿಕವಾಗಿ ಪಡಿತರದಾರರು ಮಾರಾಟ ಮಾಡುತ್ತಿರುವ ಕುರಿತು ದೂರು ಕೇಳಿಬಂದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಜಿಲ್ಲಾಡಳಿತ ಗ್ರಾಮವಾರು ಅಭಿಪ್ರಾಯ ಸಂಗ್ರಹಣೆಗೆ ಮುಂದಾಗಿದೆ.

ಆಹಾರ ಇಲಾಖೆ ಅಧಿಕಾರಿಗಳಿಗೆ ಈ ಸಂಬಂಧ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸೂಚನೆ ನೀಡಿದ್ದು, ನ್ಯಾಯಬೆಲೆ ಅಂಗಡಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೇ ಹಳ್ಳಿ ಹಳ್ಳಿಗೆ ತೆರಳಿ ಮಾಹಿತಿ ಸಂಗ್ರಹಿಸಬೇಕು. ಪ್ರತಿ ಸದಸ್ಯರಿಗೆ 10 ಕೆ.ಜಿ. ಅಕ್ಕಿ ಕೊಡಲಾಗುತ್ತಿದ್ದು ಅದು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿಲ್ಲ. ಹೆಚ್ಚುವರಿ ಅಕ್ಕಿಯನ್ನು ಪಡಿತರದಾರರು ಮಾರಾಟ ಮಾಡುತ್ತಿದ್ದಾರೆ. 5 ಕೆ.ಜಿ. ಅಕ್ಕಿ ಬದಲಿಗೆ ಪರ್ಯಾಯ ಪದಾರ್ಥ ಕೊಡುವಂತೆ ಮನವಿ ಸಲ್ಲಿಸಿದ್ದಾರೆ. ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಲು ಜಿಲ್ಲಾಡಳಿತ ಸಿದ್ಧತೆ ಕೈಗೊಂಡಿದೆ.

**ನ್ಯಾಯಬೆಲೆ ಅಂಗಡಿಗಳಲ್ಲೂ ಅದೇ ಕಥೆ**

ಜಿಲ್ಲಾದ್ಯಂತ 880 ನ್ಯಾಯಬೆಲೆ ಅಂಗಡಿಗಳಿವೆ. ಆಲೂರಿನಲ್ಲಿ 44, ಅರಸೀಕೆರೆ 202, ಅರಕಲಗೂಡು 86, ಬೇಲೂರು 86, ಚನ್ನರಾಯಪಟ್ಟಣ 112, ಹಾಸನ 171, ಹೊಳೆನರಸೀಪುರ 118, ಸಕಲೇಶಪುರ ತಾಲ್ಲೂಕಿನಲ್ಲಿ 61 ನ್ಯಾಯಬೆಲೆ ಅಂಗಡಿಗಳಿದ್ದು ಅಲ್ಲಿನ ಸಿಬ್ಬಂದಿಗೆ ಈ ಕುರಿತು ಮಾಹಿತಿ ಸಂಗ್ರಹಿಸುವಂತೆ ಸೂಚಿಸಲಾಗಿದೆ. ಬಹುತೇಕರ ಅಭಿಪ್ರಾಯ ಅಕ್ಕಿ ಹೊರೆ ಹೆಚ್ಚುತ್ತಿದೆ ಎಂಬುದೇ ಆಗಿದೆ.

**ತಿಂಗಳಿಗೆ 79 ಸಾವಿರ ಕ್ವಿಂಟಾಲ್ ಅಕ್ಕಿ**

ಪ್ರತಿ ತಿಂಗಳು ಹಾಸನ ಜಿಲ್ಲೆಗೆ 79 ಸಾವಿರ ಕ್ವಿಂಟಾಲ್ ಅಕ್ಕಿ ಸರಬರಾಜು



> ಪ್ರತಿ ಕುಟುಂಬದ ಸದಸ್ಯರಿಗೆ 10 ಕೆ.ಜಿ. ಅಕ್ಕಿ ಕೊಡುತ್ತಿದ್ದು ಅದನ್ನು ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಇದೆ. ಜಿಲ್ಲಾಧಿಕಾರಿ ಅವರ ಮಾರ್ಗದರ್ಶನದಂತೆ ಗ್ರಾಮವಾರು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ.
>
> - ಅರುಣ್‌ಕುಮಾರ್ ಸಂಗಾವಿ, ಆಹಾರ ಇಲಾಖೆ ಉಪನಿರ್ದೇಶಕ

ಆಗುತ್ತಿದ್ದು ಅದನ್ನು ಸಮರ್ಪಕವಾಗಿ ವಿತರಣೆ ಮಾಡಲಾಗುತ್ತಿದೆ. ಆದರೆ ಎಲ್ಲಾ ಅಕ್ಕಿಯೂ ಮನೆ ತಲುಪುತ್ತಿಲ್ಲ. ತಮಗೆ ಅವಶ್ಯ ಇದ್ದಷ್ಟು ಅಕ್ಕಿ ಇಟ್ಟುಕೊಂಡು ಉಳಿದಿದ್ದನ್ನು ನ್ಯಾಯಬೆಲೆ ಅಂಗಡಿಯಿಂದಲೇ ಹೋಟೆಲ್, ದಿನಸಿ ಅಂಗಡಿಗಳು, ಹಿಟ್ಟಿನ ಗಿರಣಿಗಳಿಗೆ ಮಾರಾಟ ಮಾಡುತ್ತಿದ್ದಾರೆಂಬ ಆರೋಪಗಳು ಕೇಳಿಬಂದಿವೆ.

ಉಚಿತವಾಗಿ ಸಿಗುವ ಅಕ್ಕಿಯನ್ನು ಕೆ.ಜಿ.ಗೆ 10 ರಿಂದ 20 ರೂ. ಕೊಟ್ಟು ಖರೀದಿಸುತ್ತಿರುವುದರಿಂದ ಪಡಿತರದಾರರು ಅದೇ ಹಣದಲ್ಲಿ ಬೇರೆ ಸಾಮಾಗ್ರಿಗಳ ಖರೀದಿ ಮಾಡುತ್ತಿದ್ದಾರೆ. ಇದೇ ಕೆಲಸವನ್ನು ಸರ್ಕಾರವೇ ಮಾಡಬೇಕೆಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

2023ರ ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಘೋಷಿಸಿದ ಪಂಚ ಗ್ಯಾರಂಟಿಗಳಲ್ಲಿ ಅನ್ನಭಾಗ್ಯವೂ ಸೇರಿದೆ. ಪ್ರತಿ ಸದಸ್ಯರಿಗೆ 10 ಕೆ.ಜಿ. ಅಕ್ಕಿ ಕೊಡುವ ಭರವಸೆ ನೀಡಲಾಗಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ಆರಂಭದಲ್ಲಿ ಅಗತ್ಯಕ್ಕೆ ತಕ್ಕಷ್ಟು ಅಕ್ಕಿ ಲಭ್ಯವಾಗದ ಇದ್ದಾಗ 5 ಕೆ.ಜಿ. ಅಕ್ಕಿ ಹಾಗೂ ಉಳಿದ 5 ಕೆ.ಜಿ. ಅಕ್ಕಿ ಬದಲಿಗೆ ಹಣವನ್ನು ಪಡಿತರದಾರರ ಖಾತೆಗೆ ಜಮೆ ಮಾಡಲಾಗುತ್ತಿತ್ತು. ಕಳೆದ ಆರು ತಿಂಗಳಿಂದ ಪೂರ್ಣ ಪ್ರಮಾಣದ 10 ಕೆ.ಜಿ. ಅಕ್ಕಿ ವಿತರಿಸಲಾಗುತ್ತಿದೆ. ಈಗ ಆ ಅಕ್ಕಿಯೂ ಹೊರೆಯಾಗುತ್ತಿದೆ ಎನ್ನಲಾಗಿದೆ.

**ಇಂದಿರಾ ಆಹಾರ ಕಿಟ್ ಬೇಗ ಕೊಡಿ**

ಅಕ್ಕಿ ಪ್ರಮಾಣ ಹೆಚ್ಚಾಗುತ್ತಿದೆ ಎಂಬ ವರದಿ ಕೇಳಿಬಂದ ಹಿನ್ನೆಲೆಯಲ್ಲಿ ಇಂದಿರಾ ಆಹಾರ ಕಿಟ್ ಮೂಲಕ 2 ಕೆ.ಜಿ. ಗೋಧಿ, 1 ಕೆ.ಜಿ. ಸಕ್ಕರೆ, ಕಾಲು ಕೆ.ಜಿ. ಟೀ/ಕಾಫಿ ಪೌಡರ್ ಕೊಡುವ ಮಹತ್ವದ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ. ಜೂನ್ 25ರಂದು ಈ ರೀತಿಯ ಮಹತ್ವದ ಆದೇಶವನ್ನು ಸರ್ಕಾರ ಹೊರಡಿಸಿತಾದರೂ ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮೋದನೆ ಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಇಂದಿರಾ ಆಹಾರ ಕಿಟ್ ವಿತರಣೆ ಸದ್ಯಕ್ಕೆ ಸಾಧ್ಯವಿಲ್ಲ ಎಂಬಂತಾಗಿದೆ. ಸರ್ಕಾರದ ಯೋಜನೆ ಏನಾದರೂ ಇರಲಿ. ನಮ್ಮ ಜಿಲ್ಲೆಯ ವಸ್ತುಸ್ಥಿತಿಯನ್ನು ಸರ್ಕಾರಕ್ಕೆ ಸಲ್ಲಿಸೋಣ ಎಂಬುದು ಅಧಿಕಾರಿಗಳ ಉದ್ದೇಶವಾಗಿದೆ.

# ಕೆಂಪೇಗೌಡರ ಆದರ್ಶ ಗುಣ ಪಾಲಿಸೋಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ನಾಡಪ್ರಭು ಕೆಂಪೇಗೌಡ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದರೆ ಆರೋಗ್ಯಕರ ಸಮಾಜ ನಿರ್ಮಾಣವಾಗುತ್ತ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ತಾಲ್ಲೂಕಿನ ನಾಗಲಾಪುರ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿಯಲ್ಲಿ ಮಾತನಾಡಿ, ಕೆಂಪೇಗೌಡರು ಕಟ್ಟಿದ ಬೆಂಗಳೂರು ನಗರ ವಿಶ್ವವನ್ನೇ ಆಕರ್ಷಿಸುತ್ತಿದೆ. ಮಹಾನಗರ ನಿರ್ಮಾಣವೊಂದೇ ಕೆಂಪೇಗೌಡರ ಉದ್ದೇಶವಾಗಿರದೇ ಸರ್ವ ಸಮುದಾಯಗಳ ಏಳಿಗೆಗೆ ಶ್ರಮಿಸಿದ್ದಾರೆ. ಅವರು ಒಬ್ಬ ಸಾಮ್ರಾಟ ಮಾತ್ರವಲ್ಲದೆ ಧರ್ಮಪ್ರಭು ಆಗಿದ್ದರು. ಕೆಂಪೇಗೌಡರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗಬೇಕು ಎಂದರು.

ಒಕ್ಕಲಿಗ ಸಮುದಾಯವನ್ನು ಮುನ್ನೆಲೆಗೆ ತಂದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಕೃಷಿ ಕಾಯಕ ಮಾಡಿಕೊಂಡಿದ್ದ ಸಮುದಾಯ ಇಂದು ರಾಜಕೀಯ, ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಗುರುತರ ಪಾತ್ರ ವಹಿಸಿದೆ. ಸಮಾಜ ಇಷ್ಟೆಲ್ಲ ಸಾಧನೆ ಮಾಡಲು ಹಿರಿಯರು ಕೈಗೊಂಡ ಕಾರ್ಯಗಳೇ ಕಾರಣ. ಸರ್ವ ಸಮುದಾಯದವರನ್ನು ಪ್ರೀತಿಸುತ್ತಾ ಎಲ್ಲರ ಏಳಿಗೆಗೆ ಶ್ರಮಿಸಿದರೆ ನಾವು ಉನ್ನತಿ ಸಾಧಿಸಬಹುದಾಗಿದೆ ಎಂದು ಹೇಳಿದರು.

# ಸಂಘಟನೆಯಿಂದ ಸಮಾಜದ ಬೆಳವಣಿಗೆ ಸಾಧ್ಯ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂಘಟನೆ ಮೂಲಕ ಮಾಡುವ ಕಾರ್ಯಕ್ರಮಗಳು ಹೆಚ್ಚಿನ ಜನರಿಗೆ ತಲುಪುವ ಜೊತೆಗೆ ಸಮಾಜದ ಬೆಳವಣಿಗೆಗೂ ಪೂರಕವಾಗುತ್ತದೆ ಎಂದು ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಹೆಚ್.ಎಸ್. ಮಂಜುನಾಥಮೂರ್ತಿ ಹೇಳಿದರು.

ನಗರದ ಶ್ರೀ ಗಾಯತ್ರಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ಸಂಘದ ಸದಸ್ಯರು ಮತ್ತು ಕುಟುಂಬಸ್ಥರಿಗೆ ಏರ್ಪಡಿಸಿದ್ದ ಹೃದಯ ಸಂಬಂಧಿ ವೈದ್ಯಕೀಯ ಪರೀಕ್ಷೆಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿ, ಜಿಲ್ಲೆಯಲ್ಲೇ ಉತ್ತಮ ಸಂಘವೆಂಬ ಹೆಗ್ಗಳಿಕೆ ಗಾಯತ್ರಿ ಪತ್ತಿನ ಸಹಕಾರ ಸಂಘಕ್ಕಿದೆ. ಸದಸ್ಯರ ಆರೋಗ್ಯ ದೃಷ್ಟಿಯಿಂದ ಈ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದರು.

ಹೃದ್ರೋಗ ತಜ್ಞ ಡಾ. ಅನೂಪ್ ಮಾತನಾಡಿ, ಯುವಕರು ಆರೋಗ್ಯದ ಬಗ್ಗೆ ಉದಾಸೀನತೆ ತೋರುತ್ತಿರುವುದೇ ಹೃದಯಾಘಾತ ಪ್ರಕರಣಗಳು ಹೆಚ್ಚಾಗಲು ಕಾರಣವಾಗಿದೆ. ಆಧುನಿಕ ಜೀವನ ಪದ್ಧತಿ ಸಮಸ್ಯೆಗೆ ಎಡೆಮಾಡಿಕೊಡುತ್ತಿದೆ. ಆರ್ಥಿಕ ವೆಚ್ಚವೂ ಹೆಚ್ಚಾಗುತ್ತಿರುವುದರಿಂದ ಸಂಘದ ಸದಸ್ಯರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಸಂಘದ ಪದಾಧಿಕಾರಿಗಳು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗಾಯತ್ರಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಜಿ. ರಂಗನಾಥ ಮಾತನಾಡಿ, 150ಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣಾ ಶಿಬಿರದ ಲಾಭ ಪಡೆದಿದ್ದಾರೆ. ವೈದ್ಯಕೀಯ ವೆಚ್ಚಕ್ಕೆ ಸದಸ್ಯರಿಗೆ ಆರ್ಥಿಕ ಹೊರೆ ಕಡಿಮೆ ಮಾಡಲು ವಿಮೆ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಸಂಘದ ಮಾಜಿ ಅಧ್ಯಕ್ಷ ಕೆ.ಎಸ್. ನಾಗರಾಜ್ ಮಾತನಾಡಿ, ಗಾಯತ್ರಿ ಪತ್ತಿನ ಸಹಕಾರ ಸಂಘ ಹಿಂದಿನಿಂದಲೂ ಒಳ್ಳೆಯ ಕಾರ್ಯಕ್ರಮ ಆಯೋಜಿಸುತ್ತಾ ಬಂದಿದೆ. ಅದೇ ಪದ್ಧತಿ ಮುಂದುವರಿಸುವುದರ ಜೊತೆಗೆ ವಿಭಿನ್ನ ಆಲೋಚನೆಗಳೊಂದಿಗೆ ಹಾಲಿ ಅಧ್ಯಕ್ಷರು ಕೆಲಸ ಮಾಡುತ್ತಿದ್ದಾರೆ ಎಂದರು.

ಸಂಘದ ನಿರ್ದೇಶಕರಾದ ಎಸ್. ರಘುನಂದನ್, ಹೆಚ್.ಎಲ್. ವಿಜಯ್ ಕುಮಾರ್, ಹೆಚ್.ಪಿ. ಸೋಮಶೇಖರ, ಆಶಾ ಕುಮಾರಸ್ವಾಮಿ, ಹೆಚ್.ಎಸ್. ನಂದಾಮಣಿ ಮತ್ತಿತರರಿದ್ದರು.

# ಹಳ್ಳಿಕಾರ ಸಮುದಾಯಕ್ಕೆ ಸರ್ಕಾರದ ಸವಲತ್ತು ತಲುಪಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿಂದುಳಿದ ವರ್ಗಗಳ ಒಳಸಲಾತಿಗಾಗಿ ಬೇಡ ಜಂಗಮರು ಬೇಡಿಕೆ ಇಡುತ್ತಿದ್ದಾರೆ. ಅವರಿಗಿಂತಲೂ ಹಳ್ಳಿಕಾರ ಸಮುದಾಯ ಶೋಷಣೆ ಅನುಭವಿಸುತ್ತಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ರಾಜ್ಯಾಧ್ಯಕ್ಷ ಹೆಚ್.ಎಂ. ರೇವಣ್ಣ ಹೇಳಿದರು.

ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ಆರ್.ಎಂ.ಆರ್. ಹಳ್ಳಿಕಾರ ಫೌಂಡೇಶನ್ ವತಿಯಿಂದ ನಡೆದ ಹಾಸನ, ಮೈಸೂರು, ಮಂಡ್ಯ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯ ಹಳ್ಳಿಕಾರ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ಹಳ್ಳಿಕಾರ ಸಮುದಾಯವನ್ನು ಹಿಂದುಳಿದ ವರ್ಗಕ್ಕೆ ಸೇರಿಸಿ ಎಂದು ಇಂದಿಗೂ ಹೋರಾಟ ನಡೆಯುತ್ತಿದೆ. ತೆರೆಮರೆಯಲ್ಲಿ ಬೇಡ ಜಂಗಮರು ಸವಲತ್ತು ಪಡೆಯುತ್ತಿದ್ದಾರೆ. ಹಿಂದುಳಿದ ವರ್ಗಕ್ಕೆ ಪಂಚಮಸಾಲಿ ಸಮುದಾಯ ಸೇರಿಸಲು ಹೋರಾಟ ನಡೆಯುತ್ತಿದೆ. ಆದರೆ ನಿಜವಾಗಿಯೂ ಸರ್ಕಾರದ ಸವಲತ್ತು ಹಳ್ಳಿಕಾರರಿಗೆ ತಲುಪಬೇಕು ಎಂದು ಪ್ರತಿಪಾದಿಸಿದರು.

ನಾವು ಕುರಿ (ಕುರುಬರು) ಕಾಯುವವರು, ನೀವು ದನ ಕಾಯುವವರು ಇಬ್ಬರು ಅಣ್ಣ ತಮ್ಮಂದಿರಿದ್ದಂತೆ. ಹಳ್ಳಿಕಾರ ಸಮುದಾಯದಲ್ಲಿ ಹಿಂದೆ ಸಂಘಟನೆಯ ಕೊರತೆ ಇತ್ತು. ಈಗ ಸಂಘಟನೆಯಾಗಿದೆಯಾದರೂ ಹಕ್ಕಿಗಾಗಿ ಬೀದಿಗಿಳಿದು ಹೋರಾಟ ಮಾಡುತ್ತಿಲ್ಲ ಎಂದರು.

**ವಿದ್ಯಾರ್ಥಿಗಳಿಗಾಗಿ 1.50 ಕೋಟಿ ರೂ.:**

ಹಳ್ಳಿಕಾರ ಸಮಾಜ ಕಟ್ಟುವ ಕೆಲಸವನ್ನು ಹೇಳಿಕೊಟ್ಟವರು ಆರ್.ಎಂ.ಆರ್. ಫೌಂಡೇಶನ್ ಅಧ್ಯಕ್ಷ ಕೆ.ಎಂ. ನಾಗರಾಜು. 1.50 ಕೋಟಿ ರೂ. ಸಮುದಾಯದ




ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಮೀಸಲಿಟ್ಟಿದ್ದಾರೆ. ವಿದ್ಯಾರ್ಥಿಗಳು ಅದರ ಸದುಪಯೋಗ ಪಡಿಸಿಕೊಂಡು ಸಾಧನೆಯ ಮೆಟ್ಟಿಲೇರಬೇಕು. ಆಗಮಾತ್ರ ಈ ಸಮಾರಂಭಕ್ಕೆ ಸಾರ್ಥಕತೆ ಬರುತ್ತದೆಂದರು.

ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವುದನ್ನು ಪೋಷಕರು ಅವಶ್ಯವಾಗಿ ಮಾಡಬೇಕು. ವಿದ್ಯೆಯಿದ್ದರೇ ಎಲ್ಲವೂ ಸಾಧ್ಯ. ವಿದ್ಯಾರ್ಥಿಗಳು ಕನಸು ಕಾಣಬೇಕು. ಬದ್ಧತೆ, ಶ್ರದ್ಧೆ, ಛಲದಿಂದ ಅಂದುಕೊಂಡದ್ದನ್ನು ಸಾಧಿಸಬೇಕು ಎಂದು ಸಲಹೆ ನೀಡಿದರು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಸಮಾನತೆ ಅಗತ್ಯ. ಅದು ಕೇವಲ ವಿದ್ಯಾಭ್ಯಾಸದಿಂದ ಮಾತ್ರ ಸಾಧ್ಯ. ಪೋಷಕರು ಗಂಡು ಹೆಣ್ಣು ಇಬ್ಬರನ್ನು ಸಮಾನತೆಯಿಂದ ನೋಡಿ ವಿದ್ಯಾಭ್ಯಾಸಕ್ಕೆ ಒತ್ತು ನೀಡಬೇಕು. ಇತ್ತೀಚಿನ ವಿದ್ಯಾರ್ಥಿಗಳು ಮೊಬೈಲ್‌ಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ವಿದ್ಯಾರ್ಥಿಗಳು ಉತ್ತಮ ಸಾಧನೆಗಾಗಿ ಮೊಬೈಲ್ ಬಿಟ್ಟು ಪುಸ್ತಕ ಹಿಡಿಯಬೇಕು ಎಂದು ಹೇಳಿದರು.

ಚಿಕ್ಕಮಗಳೂರು ಶಾಸಕ ಹೆಚ್.ಡಿ. ತಮ್ಮಯ್ಯ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದಂತೆ ಶಿಕ್ಷಣ ಎಂಬುದು ಹುಲಿಯ ಹಾಲಿದ್ದಂತೆ. ಹಾಗಾಗಿ ಶಿಕ್ಷಣ ಕಲಿತರೆ ನಿಮ್ಮ ಭವಿಷ್ಯ ಉಜ್ವಲವಾಗಿರುತ್ತದೆ. ಯುವಕರಲ್ಲಿ ಛಲ ಇದ್ದರೆ ಸಾಧನೆ ಸಾಧ್ಯ. ಕೇವಲ ಎಂಜಿನಿಯರ್, ವೈದ್ಯರಾಗುವುದೇ ಸಾಧನೆಯಲ್ಲ. ಐಎಎಸ್, ಐಪಿಎಸ್, ಉಪನ್ಯಾಸಕ ಸೇರಿ ಅನೇಕ ಹುದ್ದೆಗಳಿವೆ. ಆಸಕ್ತ ಕ್ಷೇತ್ರಗಳಲ್ಲಿ ಕೆಲಸ ಪಡೆದು ಸಮಾಜಕ್ಕೆ ಒಳಿತಾಗುವ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ವಿದ್ಯಾರ್ಥಿಗಳು ದೊಡ್ಡ ಕನಸು ಕಾಣಬೇಕು. ಆಗಮಾತ್ರ ತೃಪ್ತಿ ಕೊಡುವಂತ ಕೆಲಸ ಸಿಗುತ್ತದೆ. ಪೋಷಕರು ಮಕ್ಕಳ ಹಿತಾಸಕ್ತಿಗೆ ತಕ್ಕಂತೆ ವಿದ್ಯಾಭ್ಯಾಸ ಕೊಡಿಸಬೇಕು ಎಂದರು.

ಫೌಂಡೇಶನ್ ಅಧ್ಯಕ್ಷ ಕೆ.ಎಂ. ನಾಗರಾಜ್ ಮಾತನಾಡಿ, ನಾವು ನೀಡುವ ಅವಕಾಶ ಉಪಯೊಗಿಸಿಕೊಂಡು ಸ್ಪರ್ಧಾತ್ಮಕ ಯುಗದಲ್ಲಿ ಶ್ರದ್ಧೆಯಿಂದ ವ್ಯಾಸಂಗ ಮಾಡಿ ಸಮಾಜಕ್ಕೆ ಸಹಾಯವಾಗದಿದ್ದರೂ ಕುಟುಂಬಕ್ಕೆ ನೆರವಾಗುವಂತೆ ಬಾಳಬೇಕು. ಈ ಕಾಲದಲ್ಲಿ ಹೆಚ್ಚು ಅಂಕ ಪಡೆದರೆ ಯೋಗ್ಯವಾದ ಸ್ಥಾನ ಪಡೆಯಲು ಸಾಧ್ಯ. ಮೆಡಿಕಲ್, ಎಂಜಿನಿಯರ್ ಹೊರತಾಗಿ ಅನೇಕ ವಿಭಾಗದಲ್ಲಿ ಉನ್ನತ ವ್ಯಾಸಂಗ ಅವಕಾಶವಿದೆ. ಅದರ ಸದುಪಯೋಗ ಪಡೆಯಬೇಕು ಎಂದರು.

ಪತ್ರಕರ್ತ ಸುದರ್ಶನ್ ಚೆನ್ನಂಗಿಹಳ್ಳಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಹಾಗೂ ಯುವಕರಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿದೆ. ಗುರು-ಹಿರಿಯರನ್ನು ಗೌರವಿಸುವುದು ಕಡಿಮೆಯಾಗುತ್ತಿದೆ. ಹಾಗಾಗಿ ಪೋಷಕರು, ಶಿಕ್ಷಕರು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಕಲಿಸಬೇಕು ಎಂದರು.

ಕಾರ್ಯಕ್ರಮದಲ್ಲಿ 142 ವಿದ್ಯಾರ್ಥಿಗಳಿಗೆ ತಲಾ 5 ಸಾವಿರ ರೂ. ಚೆಕ್ ನೀಡುವ ಮೂಲಕ ಸುಮಾರು 7.10 ಲಕ್ಷ ರೂ. ವಿದ್ಯಾರ್ಥಿ ವೇತನ ನೀಡಲಾಯಿತು. ಮುಖಂಡರಾದ ಪಟೇಲ್ ಶಿವಪ್ಪ, ಆನಂದ್, ಶ್ರೀನಿವಾಸ್ ಮತ್ತಿತರರಿದ್ದರು.

# ಕರ್ತವ್ಯ ಮರೆತ ಸೆಸ್ಕ್ ಸಿಬ್ಬಂದಿ ವರ್ಗಾವಣೆಗೆ ಆಗ್ರಹ



ಆಲೂರು: ಸೆಸ್ಕ್ ಸಿಬ್ಬಂದಿ ನಿರ್ಲಕ್ಷ್ಯದಿಂದ ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿದ್ದು ಕರ್ತವ್ಯ ಲೋಪ ಎಸಗುವವರನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿ ಮಗ್ಗೆ ಗ್ರಾಮಸ್ಥರು ಸೆಸ್ಕ್ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಮಗ್ಗೆ ಹಾಗೂ ಸುತ್ತಲಿನ ಭಾಗದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಮಗ್ಗೆ ಹಾಗೂ ಕೆ. ಹೊಸಕೋಟೆ ಹೋಬಳಿ ವ್ಯಾಪ್ತಿಯಲ್ಲಿ ಹಲವು ದಿನಗಳಿಂದ ವಿದ್ಯುತ್ ಕಣ್ಣಾ ಮುಚ್ಚಾಲೆ ಮುಂದುವರಿದಿದೆ. ಇಲ್ಲಿ ಕಾರ್ಯನಿರ್ವಹಿಸುವ ಸೆಸ್ಕ್ ಸಿಬ್ಬಂದಿ ಜನಸಾಮಾನ್ಯರಿಗೆ ಸರಿಯಾಗಿ ಸ್ಪಂದಿಸದೆ ಉಡಾಫೆಯಿಂದ ವರ್ತಿಸುತ್ತಿದ್ದಾರೆ. ಕರ್ತವ್ಯ ಪ್ರಜ್ಞೆ ಮರೆತ ಸಿಬ್ಬಂದಿಯನ್ನು ತಕ್ಷಣ ವರ್ಗಾವಣೆ ಮಾಡಬೇಕು ಎಂದು ಆಗ್ರಹಿಸಿದರು. ಗ್ರಾಮದ ಕಾಳಿಂಗ ಮಾತನಾಡಿ, ಕೆಲವು ಅಧಿಕಾರಿಗಳ ಬೇಜವಾಬ್ದಾರಿತನದಿಂದ ಭಾಗದಲ್ಲಿ ಹಲವು ದಿನಗಳಿಂದ ವಿದ್ಯುತ್ ಸಮಸ್ಯೆ ಹೆಚ್ಚಿದೆ. ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಿದೆ. ಈ ಬಗ್ಗೆ ಹಲವು ತಿಂಗಳಿನಿಂದ ಸೆಸ್ಕಾಂ ಅಧಿಕಾರಿಗಳಿಗೆ ತಿಳಿಸುತ್ತಿದ್ದರೂ ಯಾವ ಪ್ರಯೋಜನವಾಗಿಲ್ಲ. ಭಾಗದಲ್ಲಿ ಕಾಡಾನೆಗಳ ಉಪಟಳ ಹೆಚ್ಚಿದೆ. ದಿನದ 24 ಗಂಟೆಯೂ ವಿದ್ಯುತ್ ಸರಬರಾಜು ಮಾಡಬೇಕೆನ್ನುವ ನಿಯಮವಿದ್ದರೂ ಅಧಿಕಾರಿಗಳು ತಾತ್ಸಾರ ತೋರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

# ಅಪಘಾತದಲ್ಲಿ ಮಹಿಳೆ ಸಾವು ಎಂಟು ಜನರಿಗೆ ಗಾಯ

ಚನ್ನರಾಯಪಟ್ಟಣ: ತಾಲ್ಲೂಕಿನ ಸೋಮವಾರ ಸಂತೆ ಗೇಟ್‌ನಲ್ಲಿ ರಸ್ತೆಗೆ ಅಡ್ಡಲಾಗಿ ಬಂದ ಹಸುವಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಯತ್ನಿಸಿದ ಕಾರು ಚಾಲಕ ಮುಂದೆ ಹೊರಟಿದ್ದ ಟಾಟಾಏಸ್ ವಾಹನಕ್ಕೆ ಡಿಕ್ಕಿ ಮಾಡಿದ ಪರಿಣಾಮ ಚಾಲಕನ ತಾಯಿ ಮೃತಪಟ್ಟು ಎಂಟು ಜನರು ಗಾಯಗೊಂಡಿದ್ದಾರೆ.

ಹಾಸನದ ವಿವೇಕಾನಂದ ನಗರದ ಚೂಡಾಮಣಿ (55) ಮೃತರು. ಚಾಲಕ ಹರೀಶ, ತಂದೆ ಸ್ವಾಮಿಗೌಡ, ಅತ್ತಿಗೆ ಪೂಜಾ, ಮಕ್ಕಳಾದ ಕುನಾಲ್, ಹನೀಶ, ಸುನಾದ್, ಮಂಜುಶ್ರೀ ಹಾಗೂ ಟಾಟಾಏಸ್ ಚಾಲಕ ಅಜೀಜ್ ಖಾನ್ ಎಂಬುವರಿಗೆ ಗಂಭೀರ ಏಟಾಗಿದೆ.

ಹರೀಶ್ ಮತ್ತು ಕುಟುಂಬಸ್ಥರು ಹಿರೀಸಾವೆ ಸಮೀಪದ ಮೂಕಿಕೆರೆ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಮುಗಿಸಿಕೊಂಡು ಹಾಸನಕ್ಕೆ ವಾಪಸ್ಸಾಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಏಕಾಏಕಿ ಹಸು ಅಡ್ಡ ಬಂದಿದ್ದರಿಂದ ಅದಕ್ಕೆ ಡಿಕ್ಕಿಯಾಗುವುದನ್ನು ತಪ್ಪಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮುಂದೆ ಹೊರಟಿದ್ದ ವಾಹನಕ್ಕೆ ಡಿಕ್ಕಿ ಮಾಡಿದ್ದಾರೆ. ಅಪಘಾತದ ರಭಸಕ್ಕೆ ಎರಡೂ ವಾಹನಗಳು ಜಖಂಗೊಂಡಿವೆ.

ಸ್ಥಳೀಯರು ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರು. ತೀವ್ರ ರಕ್ತಸ್ರಾವವಾದ ಹಿನ್ನಲೆ ಚೂಡಾಮಣಿ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜುಲೈ-29

**1588:** ಸ್ಪೇನ್ ದೇಶದ ಆರ್ಮಡಾ ನೌಕಾಪಡೆಯು ಇಂಗ್ಲೆಂಡಿನ ವಿರುದ್ಧದ ಯುದ್ಧದಲ್ಲಿ ಸೋಲು ಕಂಡು ಪರಾಜಿತವಾಯಿತು.

**1836:** ಪ್ಯಾರಿಸ್‌ನಲ್ಲಿ ಆರ್ಕ್ ಡೆ ಟ್ರಾಯೊಂಫ್ ಬಹಿರಂಗವಾಗಿ ಉದ್ಘಾಟನೆಯಾಯಿತು.

**1957:** ಅಂತಾರಾಷ್ಟ್ರೀಯ ಅಣ್ವಾಯು ಆಯೋಗ ಸ್ಥಾಪಿಸಲಾಯಿತು.

**1981:** ಪ್ರಿನ್ಸ್ ಚಾರ್ಲ್ಸ್ ಮತ್ತು ಲೇಡಿ ಡಯಾನಾ ಸ್ಪೆನ್ಸರ್ ಮದುವೆಯಾದರು. ಈ ಮದುವೆ ವಿಶ್ವದಾದ್ಯಂತ ನೇರ ಪ್ರಸಾರವಾಗಿತ್ತು.

**2005:** ಅಸಾಮ್ ರಾಜ್ಯದ ಗುವಾಹಾಟಿಯಲ್ಲಿ ಬಾಂಬ್ ಸ್ಫೋಟವಾಗಿ 36 ಜನರು ಸಾವನ್ನಪ್ಪಿದರು.

**2019:** ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಪ್ರಕಟಣೆ, 34 ವರ್ಷಗಳ ನಂತರ ಭಾರತದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಘೋಷಣೆ ಮಾಡಲಾಯಿತು.

**1963:** ಆಂಧ್ರ ಪ್ರದೇಶದ ಬಾಳಂಗರ್‌ನಲ್ಲಿ ಸಂಭವಿಸಿದ ಬೆಂಕಿ ಮತ್ತು ಸ್ಫೋಟದಲ್ಲಿ ಹಲವರು ಮೃತಪಟ್ಟರು. ಇದು ಆ ಕಾಲದಲ್ಲಿ ದೊಡ್ಡ ದುರಂತವಾಗಿ ಪರಿಗಣಿಸಲಾಯಿತು.

### ಜನನ

**1904:** ಜುಂಧ್ಯಿ ಲಾಲ್ ಮೆಹ್ತಾ, ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿ ಮತ್ತು ರಾಜತಾಂತ್ರಿಕ.

**1950:** ರಾಜೇಂದ್ರ, ಗುಹಾ ಚಟರ್ಜಿ, ಭಾರತೀಯ ವಿಜ್ಞಾನಿ.

**1883:** ಮ್ಯಾನ್ ಮೆಟ್ಸರ್, ಆಸ್ಟ್ರಿಯನ್ ಕಲಾವಿದ.

**1921:** ಕ್ರಿಸ್ಟೋಫರ್ ಡ್ರ್ಯೂಟ್, ಅಮೆರಿಕದ ಖ್ಯಾತ ಬಾಹ್ಯಾಕಾಶ ವಿಜ್ಞಾನಿ.

### ಮರಣ

**1983:** ಭಾರತೀಯ ವಿಜ್ಞಾನಿ ಮತ್ತು ಸಂಶೋಧಕ ವಿ.ಎನ್. ಚಟ್ಟೋಪಾಧ್ಯಾಯ.

**1890:** ಡಚ್ ಚಿತ್ರಕಾರ ವಿನ್‌ಸೆಂಟ್ ವಾನ್ ಗೊ, ನಿಂದನೆಗೆ ಒಳಗಾಗಿ ಮಾನಸಿಕ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡರು.

**1900:** ಉದೊ ಎಮಿಲ್ ವಿಲ್ಹೆಲ್ಮ್, ಜರ್ಮನ್ ಮನೋವೈಜ್ಞಾನಿಕ ತಜ್ಞ.

# ಜನ ಮೆಚ್ಚುಗೆಯ ಕಲಾವಿದ ಮಳವಳ್ಳಿ ಗುರುಬಸವಯ್ಯ

**-ಗೊರೂರು ಅನಂತರಾಜು**

ಮೈಸೂರು ಪ್ರಾಂತ್ಯದ ಅತ್ಯಂತ ಹಿರಿಯ ಮೂಲ ಜನಪದ ಕಲಾವಿದರೆಂದರೆ ಮಳವಳ್ಳಿಯ ಗುರುಬಸವಯ್ಯನವರು. 90 ವರ್ಷದ ಅವರು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಅಂಬಳೆಯ ತುಪಾಕಿರಾಚಯ್ಯನ ವಂಶೀಕರು.

ತುಪಾಕಿರಾಚಯ್ಯನವರು ಆ ಕಾಲಕ್ಕೆ ಅಂಬಳೆಯಲ್ಲಿ 100 ಎಕರೆ ಜಮೀನುದಾರಾಗಿದ್ದರು. ಇವರಿಗೆ ಮಕ್ಕಳಿರಲಿಲ್ಲ. ಮಂಟೇಸ್ವಾಮಿಯವರು ಸಂಚಾರಕ್ಕೆ ಹೋಗಿದ್ದಾಗ ಅಂಬಳೆಯ ಜಗಲಿಯಲ್ಲಿ ಕೂರುತ್ತಾರೆ. ನಮಗೆ ಇಲ್ಲಿ ಉತ್ಸವವಾಗಬೇಕು ಎಂದಾಗ ಊರಿನ ಯಜಮಾನರಾದ ತುಪಾಕಿರಾಚಯ್ಯನಿಗೆ ತಿಳಿಸಲಾಗಿ ಅವರು ಸ್ವಾಮಿಗಳ ಉತ್ಸವ ಮಾಡಿ ಮುಗಿಸಿದ ನಂತರ ಸ್ವಾಮಿಗಳು ತುಪಾಕಿರಾಚಯ್ಯನಿಗೆ ನಿಮ್ಮ ಮಕ್ಕಳೆಲ್ಲಿ ಬರಲಿಲ್ಲ ಎಂದಾಗ ತುಪಾಕಿರಾಚಯ್ಯ ಅಯ್ಯೋ ಸ್ವಾಮಿ ನಮಗೆ ಮಕ್ಕಳಿಲ್ಲ ಎನ್ನುತ್ತಾರೆ. ನಿಮಗೆ ಮಕ್ಕಳು ಕೊಟ್ಟರೆ ನನಗೆ ಒಕ್ಕಲಾಗುತ್ತೀರ ಎಂದು ಕೇಳುತ್ತಾರೆ. ಅದಕ್ಕೆ ಸ್ವಾಮಿ ನನಗೆ 70 ವರ್ಷ. ನನ್ನ ಹೆಂಡತಿಗೆ 60 ವರ್ಷ ಈ ವಯಸ್ಸಿನಲ್ಲಿ ನಮಗೆ ಮಕ್ಕಳಾಗುವುದು ಇದು ಆಗುತ್ತದಾ ಸ್ವಾಮಿ ಎನ್ನುತ್ತಾರೆ.

ಅದಕ್ಕೆ ಸ್ವಾಮಿಗಳು ನಕ್ಕು ನಾಳೆ ಇದೇ ಜಗಲಿ ಬಳಿ ಗಂಡ-ಹೆಂಡಿರಿಬ್ಬರು ಮಡಿಯಾಗಿ ಬನ್ನಿ ಎನ್ನುತ್ತಾರೆ. ಬಂದವರಿಗೆ ಬಾಳೆಹಣ್ಣಿನ ಪ್ರಸಾದ ಕೊಡುತ್ತಾರೆ. ಅವರಿಗೆ ಒಂಬತ್ತು ತಿಂಗಳಿಗೆ ಒಂದು ಗಂಡುಮಗು ಹುಟ್ಟುತ್ತದೆ. ಜನ ಇದೇನು ಈ ವಯಸ್ಸಿನಲ್ಲಿ ಎಂದು ಜರಿಯುತ್ತಾರೆ. ಅದೇ ಮಗುವನ್ನು ಎತ್ತಿಕೊಂಡು ಮತ್ತೆ ಸ್ವಾಮೀಜಿ ಬಳಿ ಬರುತ್ತಾರೆ. ಸ್ವಾಮಿ ಈ ವಯಸ್ಸಿನಲ್ಲಿ ನಮಗೆ ಮಕ್ಕಳಾಗಿರುವುದರಿಂದ ಜನ ಇದೇನು ಕೊಸಕೋಳಿ ಎಂದು ಆಡಿಕೊಳ್ಳುತ್ತಿದ್ದಾರೆ ಎಂದು ತಮ್ಮ ಬೇಸರ ಹೇಳಿಕೊಳ್ಳುತ್ತಾರೆ.

ಆಗ ಮಗುವಿಗೆ ನಾಮಕರಣವೇನಿಟ್ಟಿರಿ ಎಂದು ಸ್ವಾಮಿಜಿ ಕೇಳಲು ಇನ್ನು ಹೆಸರಿಟ್ಟಿಲ್ಲ. ತಾವೇ ಒಂದು ಹೆಸರಿಟ್ಟು ಬಿಡಿ ಎಂದಾಗ ಜನ ಇದೇನು ಕೊಸಕೋಳಿ ಎಂದದಕ್ಕಾಗಿ ಈ ಮಗುವಿನ ಹೆಸರು ಕೊಸಕೋಳಿಸಿದ್ದ ಎಂದು ಹೆಸರಿಟ್ಟುಬಿಡಿ



ಎನ್ನುತ್ತಾರೆ. ಆ ಹೆಸರೇ ಅವರ ಮಗುವಿನ ಹೆಸರಾಗುತ್ತದೆ. ಜನರ ನಿಂದನೆ, ಮಗುವಿನ ಪೋಷಣೆ ಇದೆಲ್ಲ ಅರಿತ ದಂಪತಿ ನಮಗೆ ಆಸ್ತಿ-ಪಾಸ್ತಿ ಏನು ಬೇಡ ಮಗು ಒಂದೇ ಸಾಕು ಎಂದು ಅಂಬಳೆ ಬಿಟ್ಟು ಮಳವಳ್ಳಿಯ ಮಂಟೇಸ್ವಾಮಿ ಮಠಕ್ಕೆ ಬಂದು ಸೇರುತ್ತಾರೆ. ಮೂಲತಃ ದಾಸರಾದ ಇವರು ನೀಲಗಾರರಾಗುತ್ತಾರೆ. ಇದು ಧರೆಗೆದೊಡ್ಡವರ ಪವಾಡವೇ ಸರಿ. ಮಠದಲ್ಲಿಯೇ ಪರಿಚಾರಕರಾಗಿದ್ದುಕೊಂಡು ಮಠದ ಸೇವೆ ಮಾಡುತ್ತಿರುತ್ತಾರೆ. ನಂತರ ಇವರಿಗೆ ಒಂದು ಮನೆ ಮಾಡಬೇಕು ಎಂದು ಮನೆ ಮಾಡಿಕೊಡುತ್ತಾರೆ. ಕೊಸಕೋಳಿಸಿದ್ದನಿಗೆ ಮದುವೆಯಾಗಿ ವಂಶ ಬೆಳೆಯುತ್ತದೆ. ಅವರ ಏಳನೇ ತಲೆಮಾರೇ ಗುರುಬಸವಯ್ಯ. ಇವರ ವಂಶೀಕರು ಮಂಟೇಸ್ವಾಮಿ ಕತೆಯಾದ ಧರಗೆದೊಡ್ಡವರ ವಚನವನ್ನು ಹಾಡುವ ಅಭ್ಯಾಸ ಮಾಡಿಕೊಳ್ಳುತ್ತಾರೆ. ಅದರಂತೆ ಇವರು ನೀಲಗಾರರಾಗಿ ಪರಂಪರೆಯ ಕಾವ್ಯ ಹಾಡಿಕೊಂಡು ಬರುತ್ತಿದ್ದಾರೆ. ಇವರ ತಂದೆ, ದೊಡ್ಡಪ್ಪ ಇವರುಗಳು ತಂಬೂರಿ ಹಿಡಿದು ನಾಡಿನ ಮೇಲೆ ಹೊರಟರೆ ಇವರ ಪದ್ಯ ಕೇಳಲು ಜನ ಸೇರುತ್ತಿದ್ದರಂತೆ. ನಾನು ಚಿಕ್ಕವಳಿದ್ದಾಗ ಗುರುಬಸವಯ್ಯನವರೇ ಯುಗಾದಿ ಹಬ್ಬದ ಮಾರನೇ ದಿನ ಮನೆಮನೆಗೆ ಬಂದು ಭಿಕ್ಷ ಸಾರಿ ಹಾಡುತ್ತಿದ್ದರೆ ಅದು ಬೀದಿಯ ತುದಿಯವರೆಗೂ ಕೇಳಿಸುತ್ತಿತ್ತು. ಕೇಳಿದವರ ಮನೆಯ ಮುಂದೆ ಹೊಗಳಿಸುತ್ತಿದ್ದರು. ಅಂದರೆ ಹಿರಿಯರ ಆತ್ಮಗಳನ್ನು ಕೊಂಡಾಡುವರು ಎಂದು ಹಾಡಿ ಹೊಗಳುವರು.

ಪಿ. ನಾಗರತ್ನಮ್ಮ ಮಳವಳ್ಳಿಯವರು. ಗುರುಬಸವಯ್ಯನವರು ಬಿಳಿ ಅಂಗಿ ಬಿಳಿ ಪಂಚೆ ಕೆಂಪು ಚುಕ್ಕಿ ರುಮಾಲು ಹಾಕಿಕೊಂಡು ಎಡದ ಕೈಲಿ ಗಗ್ಗರ, ಎದೆ ಮೇಲೆ ತಂಬೂರಿ ಬೆರಳಲ್ಲಿ ಲಕ್ ಧರಿಸುತ್ತಾರೆ. ತಂಬೂರಿಯನನ್ನು ನುಡಿಸುವ ನಾದಕ್ಕೆ ತಕ್ಕಂತೆ ಗಗ್ಗರ ಡಕ್ಕಿ ನುಡಿಸಿದರೆ ಆ ಆನಂದವೇ ಬೇರೆ. ತಂಬೂರಿ ಶೃತಿ ಮಾಡುವುದರಲ್ಲಿ ನಿಸ್ಸೀಮರು. ಗುರುಬಸವಯ್ಯನವರು ಧರೆಗೆದೊಡ್ಡವರ ಕತೆ, ಚನ್ನಿಗರಾಮನ ಕತೆ, ಗಣಪತರಾಜನ ಕತೆ ಬಾಲನಾಗಮ್ಮನ ಕತೆ, ಬಸವಣ್ಣನವರ ವಚನ (ದೊಡ್ಡಬಸವಣ್ಣನ ಕತೆ), ಮೈದಾಳರಾಮನ ಕತೆ, ಕತ್ತಲರಾಜನ ಕತೆ, ಅರ್ಜುನ ಜೋಗಿ ಕತೆ ಹಾಡುತ್ತಾರೆ. ಇವರು ಹೆಚ್ಚಾಗಿ ಧರಗೆ ದೊಡ್ಡವರ ವಚನ ಹಾಡುವುದು. ಇವರೇ ಹಾಡಿರುವ ಗಣಪತರಾಜ (ಘನಕೋಟರಾಜ)ನ ಕತೆ, ಧರೆಗೆ ದೊಡ್ಡವರ ವಚನ, ಚನ್ನಿಗರಾಮನ ಕತೆಯನ್ನು ಪಿ.ನಾಗರತ್ನಮ್ಮ ಬರೆದಿದ್ದಾರೆ. ಪುಸ್ತಕ ಮುದ್ರಣದ ಹಂತದಲ್ಲಿದೆ. ಗುರುಬಸವಯ್ಯನವರು ಬಳಿ ಇರುವ ತಂಬೂರಿ ತಲತಲಾಂತರದ ತಂಬೂರಿ. ಈ ತಂಬೂರಿಯಲ್ಲಿ ನುಡಿಸುವಂತೆ ಬೇರೆ ಯಾರಿಂದಲು ನಾನು ಆ ನಾದವನ್ನು ಕೇಳಿಲ್ಲ. ಹೆಚ್ಚಿನದಾಗಿ ಗುರುಬಸವಯ್ಯನವರಂತೆ ಯಾರು ತಂಬೂರಿ ನುಡಿಸಿದ್ದನ್ನು ನಾನು ಈವರೆವಿಗು ಕೇಳಿಲ್ಲ. ಅಷ್ಟು ಇಂಪಾಗಿ ಮತ್ತು ಭಿನ್ನವಾಗಿರುತ್ತದೆ ಎಂಬ ಅಭಿಪ್ರಾಯ ಮೇಡಂ ಅವರದು. ಇವರ ಜನಪದ ಸೇವೆಗೆ ಮೆಚ್ಚಿ ಹಲವಾರು ಸಂಘಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಇತ್ತೀಚೆಗೆ 2024ನೇ ಸಾಲಿನ ಅಕಾಡಮಿ ಪ್ರಶಸ್ತಿ ಲಭಿಸಿದೆ. ಪತ್ನಿ ಪುತ್ರರು ಪುತ್ರಿಯರನ್ನು ಹೊಂದಿರುವ ಇವರು ಸಣ್ಣ ಮನೆಯಲ್ಲಿ ವಾಸವಾಗಿದ್ದರು ಜನಪದದ ಅರಮನೆಯನ್ನೆ ತಮ್ಮ ಹೃದಯದಲ್ಲಿ ಇರಿಸಿಕೊಂಡಿದ್ದಾರೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248